SC: **77/2020**
PW:38 CW:**47**

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ 57
ನಮೂನೆ ಸಂಖ್ಯೆ 4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 77/2020

| | |
|---|---|
| PW | 38 |
| CW | 47 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 01.09.2025.

| | | |
|---|---|---|
| ಸಾಕ್ಷಿಯ ಹೆಸರು | : | ಸಂತೋಷ ಕುಮಾರ್ |
| ತಂದೆಯ ಹೆಸರು | : | ಚಿಕ್ಕಣ್ಣಯ್ಯ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಚೀಫ್ ನೋಡೆಲ್ ಆಫೀಸರ್, ಭಾರತಿ ಏರ್ ಟೆಲ್ ಲಿಮಿಟೆಡ್. |
| ವಾಸಸ್ಥಳ | : | ಬೆಂಗಳೂರು |

ಮಾನ್ಯ ಸರ್ಕಾರಿ ಅಭಿಯೋಜಕರವರು ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆಗೆ ಹಾಜರಾಗಿದ್ದು, ಸಾಕ್ಷಿದಾರರು ತಾನು ಭಾರತಿ ಏರ್ ಟೆಲ್ ಲಿಮಿಟೆಡ್ ನಲ್ಲಿ ಚೀಫ್ ನೋಡೆಲ್ ಅಧಿಕಾರಿಯಾಗಿದ್ದು, ಮಾನ್ಯ ಸರ್ಕಾರಿ ಅಭಿಯೋಜಕರವರ ಗೈರು ಹಾಜರಾತಿಯಲ್ಲಿ ಸಾಕ್ಷಿ ನುಡಿಯಲು ಅನುಮತಿ ಕೋರಿದ್ದು, ನೀಡಲಾಯಿತು.

**ಮುಖ್ಯ ವಿಚಾರಣೆಃ ಸಾಕ್ಷಿ ಸ್ವತಃ**

1. ನಾನು 2022 ನೇ ಇಸವಿ ಮೇ ತಿಂಗಳಿನಿಂದ ಇಲ್ಲಿಯವರೆಗೂ ಚೀಫ್ ನೋಡೆಲ್ ಅಧಿಕಾರಿಯಾಗಿ ಭಾರತಿ ಏರ್ ಟೆಲ್ ಲಿಮಿಟೆಡ್ ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28.12.2020 ರಲ್ಲಿ ನಮ್ಮ ಸಂಸ್ಥೆಗೆ ಚಿಕ್ಕಬಳ್ಳಾಪುರ ವೃತ್ತ ನಿರೀಕ್ಷಕರು ಅರ್ಜಿ ಸಲ್ಲಿಸಿ ಮೊಬೈಲ್ ನಂಬರ್ ಗಳಾದ 9900630242, 9845599024, 9108828704, 9108480555, 9108226692, 8792157828, 8197581313, 7899153053 ಹಾಗೂ 9108319487 ಮೊಬೈಲ್ ಗಳಿಗೆ ಸಂಬಂಧಿಸಿದಂತೆ ಸಿಡಿಆರ್ ಹಾಗೂ ಸಿಎಎಫ್ ವಿವರಣೆಗಳನ್ನು ಇದರ ಜೊತೆ ಕಲಂ 65(ಬಿ) ಸರ್ಟಿಫಿಕೇಟ್ ಒದಗಿಸುವಂತೆ ಕೋರಿರುತ್ತಾರೆ. ಆ ಸಮಯದಲ್ಲಿ ನಮ್ಮ ಸಂಸ್ಥೆಯಲ್ಲಿ ಟಾಮ್ ಜಾನ್ಸನ್ ಎಂಬುವವರು ಭಾರತಿ ಏರ್ ಟೆಲ್ ಲಿಮಿಟೆಡ್ ನಲ್ಲಿ ಚೀಫ್ ನೋಡೆಲ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದು, ಅವರು ಸದರಿ ವಿವರಣೆಗಳನ್ನು ಪೊಲೀಸರಿಗೆ ಒದಗಿಸಿದ್ದು, ಅವರ ಸಹಿಯನ್ನು ನನಗೆ ಗುರುತಿಸಲು ಆಗುತ್ತದೆ.

3. ಸಾಕ್ಷಿದಾರರು ನ್ಯಾಯಾಲಯದ ಮುಂದೆ ನಿಪಿ–63 (ಕವರಿಂಗ್ ಲೆಟರ್, ಸಿ.ಡಿ.ಆರ್. ಹಾಗೂ ಸಿ.ಎ.ಎಫ್ ) ಹಾಗೂ ನಿಪಿ–64 ಸಿಡಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ–63 ರಲ್ಲಿ ಇರುವ ಟಾಮ್ ಜಾನ್ಸನ್ ಇವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–63(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಪಿ.ಎಸ್. ವಕೀಲರ ಪರವಾಗಿ ಶ್ರೀ ಕೆ.ಕೆ. ವಕೀಲರಿಂದಃ**

4. ನ್ಯಾಯಾಲಯದಿಂದ ನೋಡೆಲ್ ಆಫೀಸರ್ ಹೆಸರಿಗೆ ಸಾಕ್ಷಿ ಸಮನ್ಸ್ ಬಂದಿದ್ದು, ನನ್ನ ವೈಯಕ್ತಿಕ ಹೆಸರಿಗೆ ಬಂದಿರುವುದಿಲ್ಲ. ಈ ದಿನ ನ್ಯಾಯಾಲಯದಲ್ಲಿ ನಮ್ಮ ಸಂಸ್ಥೆಯ ಪರವಾಗಿ ಸಾಕ್ಷಿ ನುಡಿಯಲು ಸಂಸ್ಥೆಯ ಮೇಲಾಧಿಕರಿಗಳಿಂದ ನಾನು ಯಾವುದೇ ಅಧಿಕಾರ ಪತ್ರ

ಪಡೆದಿರುವುದಿಲ್ಲ. ನಿಪಿ–63 ಅನ್ನು ನಾನು ನೀಡಿರುವುದಿಲ್ಲ ಆದರೆ ನಮ್ಮ ಹಿಂದಿನ ನೋಡೆಲ್ ಆಫೀಸರ್ ರವರು ನೀಡಿರುತ್ತಾರೆ. ನಾನು ಸದರಿ ಸಂಸ್ಥೆಯಲ್ಲಿ ಈಗ ನೋಡೆಲ್ ಆಫೀಸರ್ ಆಗಿ ಕರ್ತವ್ಯ ಮಾಡುತ್ತಿರುವ ಬಗ್ಗೆ ಅದೇ ರೀತಿ ನಿಪಿ–63 ಅನ್ನು ನೀಡಿದ ಟಾಮ್ ಜಾನ್ಸನ್ ರವರು ಆ ಸಮಯದಲ್ಲಿ ನೋಡೆಲ್ ಆಫೀಸರ್ ಆಗಿರುವ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

5. ನಿಪಿ–63 ಹಾಗೂ ನಿಪಿ–64 ಅನ್ನು ನೀಡಿದ ಸಮಯದಲ್ಲಿ ನಾನು ಸಂಸ್ಥೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಅವುಗಳ ಬಗ್ಗೆ ವೈಯಕ್ತಿಕವಾಗಿ ತಿಳಿದಿಲ್ಲ ಆದರೆ ನಮ್ಮ ಸಂಸ್ಥೆಯಲ್ಲಿ ಲಭ್ಯ ಇರುವ ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿದಿರುತ್ತೇನೆ. ನಾವು ಹಾಜರುಪಡಿಸಿರುವ ಸಿಡಿಆರ್. ಗಳಲ್ಲಿ ಕರೆ ಮಾಡಿದ ಅವಧಿಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸಿಡಿಆರ್ ಗಳನ್ನು ಯಾವ ಸಿಬ್ಬಂದಿ ಮೂಲಕ, ಯಾವ ಸಿಸ್ಟಂ ಮೂಲಕ ಡೌನ್ ಲೋಡ್ ಮಾಡಿರುತ್ತದೆ ಎಂಬ ಬಗ್ಗೆ ನಿಪಿ–63 ರಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಯಾವ ಮೊಬೈಲ್ ನಂಬರ್ ಗಳಿಂದ ಯಾವ ಮೊಬೈಲ್ ಗೆ ಕರೆ ಹೋಗಿರುತ್ತದೆ ಎಂದು ಸಿಡಿಆರ್ ನಲ್ಲಿ ವಿವರಣೆ ಇದ್ದು, ಇದರ ಬಗ್ಗೆ ನಿಪಿ–63 ರಲ್ಲಿ ವಿವರಣೆ ಕೊಡುವುದಿಲ್ಲ. ನಾನು ಹೇಳಿದ ಹಾಗೆ ನಮ್ಮ ಸಂಸ್ಥೆಯ ಹಿಂದಿನ ನೋಡೆಲ್ ಅಧಿಕಾರಿಗಳು ಯಾವುದೇ ಸಿಡಿಆರ್ ಅನ್ನು ಡೌನ್ ಲೋಡ್ ಮಾಡಿ ಪೊಲೀಸರಿಗೆ ನೀಡದೇ ಇದ್ದ ರೂ ಸಹ ಪೊಲೀಸರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಸಿಡಿಆರ್ ಗಳನ್ನು ವೈಯಕ್ತಿಕವಾಗಿ ಡೌನ್ ಲೋಡ್ ಮಾಡಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್.ಆರ್.ವಿ. ವಕೀಲರಿಂದಃ</u>**

6. ಸಿಡಿಆರ್ ನಲ್ಲಿ ಒಂದು ಮೊಬೈಲ್ ನಂಬರ್ ನಿಂದ ಮತ್ತೊಬ್ಬರ ಮೊಬೈಲ್ ನಂಬರ್ ಗೆ ಕರೆ ಮಾಡಿದಾಗ ಕರೆ ಮಾಡಿದ ಮೊಬೈಲ್ ನ ಸಿಡಿಆರ್ ನಲ್ಲಿ ಮತ್ತೊಂದು ಮೊಬೈಲ್ ನಂಬರ್ ನ ಲೊಕೇಷನ್ ವಿವರಣೆ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಿಂದ ನೀಡಿದ ಸಿಡಿಆರ್ ಗಳಲ್ಲಿ ಕರೆ ಸ್ವೀಕರಿಸಿದ ಮೊಬೈಲ್ ನ ಲೊಕೇಷನ್ ವಿವರಣೆ ಇರುತ್ತದೆ. ನಾವು ನೀಡಿದ ಸಿಡಿಆರ್ ಗಳಲ್ಲಿ ಪೊಲೀಸರು ನೀಡಿದ ಮೊಬೈಲ್ ನಂಬರ್ ಗಳಿಗೆ ಸಂಬಂಧಿಸಿದಂತೆ ಮಾತ್ರ ವಿವರಣೆಗಳು ಇದ್ದು, ಬೇರೆ ನಂಬರ್ ಗಳಿಗೆ ಕರೆ ಮಾಡಿದ ಬಗ್ಗೆ ವಿವರಣೆ ಇರುವುದಿಲ್ಲ ಎಂದರೆ ಸಾಕ್ಷಿಯು ಬೇರೆ ನಂಬರ್ ಗೆ ಆ ರೀತಿ ಕರೆ ಹೋಗಿದ್ದಲ್ಲಿ ಮಾತ್ರ ಅದರ ವಿವರಣೆ ಸಿಡಿಆರ್ ನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ.

7. ಸಾಮಾನ್ಯವಾಗಿ ಒಂದು ಮೊಬೈಲ್ ಟವರ್ ನ ವ್ಯಾಪ್ತಿ ಅಂದಾಜು 1.5 ಕಿ.ಮೀ ನಿಂದ 3 ಕಿ.ಮೀ ವರೆಗೆ ಇರುತ್ತದೆ. 1.5 ಕಿ.ಮೀ ಯಿಂದ 3 ಕಿ.ಮೀ. ವ್ಯಾಪ್ತಿಯಲ್ಲಿ ಹಿಂದೆ ಮಾಡಿದ ಕರೆಗಳಿಗೆ ಸಂಬಂಧಿಸಿದಂತೆ ನಿಖರವಾದ ಟವರ್ ಲೊಕೇಷನ್ ಸಿಗುವುದಿಲ್ಲ ಆದರೆ ಈಗ ಮಾಡಿದಂತಹ ಕರೆಗಳ ಲೈವ್ ಲೊಕೇಷನ್ ಸಿಗುತ್ತದೆ. ಈ ರೀತಿ ಲೈವ್ ಲೊಕೇಷನ್ ಕಳೆದ 5 ವರ್ಷಗಳಿಂದ ಲಭ್ಯ ಇರುತ್ತದೆ. ಪೊಲೀಸರು ನಮ್ಮ ಕಚೇರಿಗೆ ನೀಡಿದ ಕೋರಿಕೆ ಪತ್ರದಲ್ಲಿ ಲೈವ್ ಲೊಕೇಷನ್ ವಿವರಣೆ ಕೇಳಿರಲಿಲ್ಲ. ನಾವು ನೀಡಿದಂತಹ ಸಿಡಿಆರ್ ನಲ್ಲಿ ಲೈವ್ ಲೊಕೇಷನ್ ಇರುವುದಿಲ್ಲ ಎಂದರೆ ಸರಿ. ಸಿಡಿಆರ್ ನಲ್ಲಿ ಸದರಿ ಮೊಬೈಲ್ ಸಿಮ್ ಗಳು ಯಾರು ಹೆಸರಿನಲ್ಲಿ ಇರುತ್ತದೆ ಎಂಬ ಅಂಶಗಳು ಇರುವುದಿಲ್ಲ. ಆದರೆ ಸಿ.ಎ.ಎಫ್ ನಲ್ಲಿ ಇದರ ವಿವರಗಳು ಸಿಗುತ್ತದೆ. ನಿಪಿ–63 ರಲ್ಲಿ ಕರೆ ಸ್ವೀಕರಿಸಿದ ಮೊಬೈಲ್ ನಂಬರ್ ನ ಲೊಕೇಷನ್ ಯಾವುದು

ಎಂದು ಪ್ರಶ್ನಿಸಿದಾಗ ಸಾಕ್ಷಿಯು ಸಿಡಿಆರ್ ನಲ್ಲಿ ಒಟ್ಟು 21 ಕಾಲಂ ವಿವರಣೆಗಳು ಇದ್ದು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ನಿಪಿ–63 ರಲ್ಲಿ 21 ಕಾಲಂಗಳು ಇಲ್ಲದೇ ಇರುವ ಕಾರಣ ಅದನ್ನು ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ–63 ರಲ್ಲಿ ಕರೆ ಸ್ವೀಕರಿಸಿ ಮೊಬೈಲ್ ನ ಲೊಕೇಷನ್ ಗೊತ್ತಾಗುವುದಿಲ್ಲ ಎಂದರೆ ಸರಿ.

8. ನಿಪಿ–63 ಸಿಡಿಆರ್ ನಲ್ಲಿ ಇರುವ ಮಾಹಿತಿಗಳು ನಿಪಿ–64 ಸಿಡಿಯಲ್ಲಿ ಇರುತ್ತದೆ. ಸಿಡಿಆರ್ ಅನಾಲಿಸಿಸ್ ಅನ್ನು ನಾವು ಮಾಡಲು ಅಧಿಕಾರ ಹೊಂದಿರುವುದಿಲ್ಲ. ನಿಪಿ–63 ಸರ್ಟಿಫಿಕೇಟ್ ನಲ್ಲಿ ಯಾವ ಅವಧಿಯಿಂದ ಯಾವ ಅವಧಿವರೆಗೆ ಸಿಡಿಆರ್ ವಿವರಣೆಗಳನ್ನು ನೀಡಿರುತ್ತೇವೆ ಎಂದು ತಿಳಿಸಿರುತ್ತೇವೆ. ನಿಪಿ–63 ಸಿಡಿಆರ್ ಗಳನ್ನು ನೋಡಿದಲ್ಲಿ ಅವುಗಳನ್ನು ಅನಾಲಿಸಿಸ್ ಆಗಿರುತ್ತದೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ–63 ಹಾಗೂ ನಿಪಿ–64 ರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಆದರೆ ನಮ್ಮ ಕಚೇರಿಯಲ್ಲಿ ಲಭ್ಯ ಇರುವ ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿದಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಗುರುತಿಸಿದ ಸಿಡಿಆರ್ ದಾಖಲೆಯ ಆಧಾರದ ಮೇಲೆ ಸದರಿ ಮೊಬೈಲ್ ನಂಬರ್ ಗಳು ಯಾವ ಲೊಕೇಷನ್ ನಲ್ಲಿ ಆಕ್ಟಿವ್ ಆಗಿತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

9. ನಿಪಿ–63 ಸಿಡಿಆರ್ ಗಳನ್ನು ನೋಡಿದಲ್ಲಿ ನಾನು ಮೇಲೆ ಹೇಳಿದ 9 ಮೊಬೈಲ್ ನಂಬರ್ ಗಳಿಗೆ ಪ್ರತ್ಯೇಕವಾಗಿ ವಿವರಣೆ ಒದಗಿಸಿರುವುದು ಕಂಡುಬರುವುದಿಲ್ಲ ಎಂದರೆ ಸಾಕ್ಷಿಯು 9845599024, 9108828704, 9108480555, 9108226692 ಹಾಗೂ 8792157828 ಮೊಬೈಲ್ ಗಳಿಗೆ ಸಂಬಂಧಿಸಿದ ವಿವರಣೆ ಇರುವುದಾಗಿ ನುಡಿದಿರುತ್ತಾರೆ.

ಮೊಬೈಲ್ ನಂಬರ್ 8792157828 ಸಂಬಂಧಿಸಿದ ಸಿಡಿಆರ್ ಉಳಿದ ಮೊಬೈಲ್ ನಂಬರ್ ಗಳ ಸಿಡಿಆರ್ ಗಿಂತ ವಿಭಿನ್ನವಾಗಿದೆ ಎಂದರೆ ಸರಿ. ಮೊಬೈಲ್ ನಲ್ಲಿ ಇರುವ ಡಾಟಾವನ್ನು ರಿಟ್ರೈವ್ ಮಾಡಿದಲ್ಲಿ ವಾಯ್ಸ್ ರೆಕಾರ್ಡ್ ಹಾಗೂ ಟೆಕ್ಸ್ಟ್ ಮೆಸೇಜ್ ವಿವರಗಳು ಸಿಗುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಒಂದು ಸರ್ವೀಸ್ ಪ್ರೊವೈಡರ್ ನಲ್ಲಿ ಸಾವಿರಾರು ಕರೆಗಳು ಇರುತ್ತದೆ ಎಂದರೆ ಸರಿ.

10. ಪೊಲೀಸರು ಸಿಡಿಆರ್ ವಿವರಗಳನ್ನು ಕೇಳಿದ ಸಮಯದಲ್ಲಿ ಯಾವ ಯಾವ ಮೊಬೈಲ್ ನಂಬರ್ ಗಳು ಯಾವ ಯಾವ ಸ್ಥಳದಲ್ಲಿ, ಯಾವ ಯಾವ ಸಮಯದಲ್ಲಿ ಆಕ್ಟೀವ್ ಆಗಿತ್ತು ಎಂದು ನಿಖರವಾದ ಲೊಕೇಷನ್ ಸಿಗುತ್ತಿತ್ತು ಎಂದರೆ ಸರಿ. ನಾವು ನೀಡಿದ ಸಿಡಿಆರ್ ಗಳಲ್ಲಿ ಯಾವ ಬಳಕೆದಾರ, ಯಾವ ಸಮಯದಲ್ಲಿ ಇದ್ದರು ಎಂಬ ಬಗ್ಗೆ ಲೈವ್ ಲೊಕೇಷನ್ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ–64 ರಲ್ಲಿ ಎಷ್ಟು ಜಿ.ಬಿ ಅಥವಾ ಎಂ.ಬಿ ಇರುತ್ತದೆ ಎಂದು ನಮೂದಿಸಿಲ್ಲ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲಂ 65(ಬಿ) ಸರ್ಟಿಫಿಕೇಟ್ ನಲ್ಲಿ ಕೊಡಬೇಕಾದುದ್ದು ಹಾಗೂ ಯಾವ ಯಾವ ಮೊಬೈಲ್ ಗಳ ಸಿಡಿಆರ್ ಗಳು ಎಷ್ಟು ಪುಟ ಇರುತ್ತದೆ ಎಂದು ಮಾಹಿತಿ ಕೊಡುವುದು ಕಡ್ಡಾಯ ಎಂದರೆ ಸರಿ. ಸಿಡಿಆರ್ ಹಾಗೂ ಸಿಎಎಫ್ ಗಳ ಪ್ರಿಂಟ್ ಔಟ್ ಅನ್ನು ದಿಃ 16.02.2021 ರಂದು ನಾವೇ ತೆಗೆದು ಪೊಲೀಸರಿಗೆ ಕೊಟ್ಟಿರುತ್ತೇವೆ.

11. ಸಿಡಿಆರ್ ಮಾಹಿತಿಗಳನ್ನು ಡಿಸಿಪಿ ಹಾಗೂ ಎಸ್.ಪಿ. ರವರು ಪಡೆಯಲು ಅಧಿಕಾರ ಹೊಂದಿರುತ್ತಾರೆ. ಸಿಡಿಆರ್ ವಿವರಣೆಗಳನ್ನು ಕೊಡುವಂತೆ ಚಿಕ್ಕಬಳ್ಳಾಪುರ ಎಸ್.ಪಿ. ರವರು

ನಮ್ಮ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಅದರಂತೆ ನಾವು ಸಿಡಿಆರ್ ವಿವರಗಳನ್ನು ಮೇಲ್ ಮೂಲಕ ಎಸ್.ಪಿ. ರವರಿಗೆ ರವಾನಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ನಿಪಿ–63 ಮತ್ತು ನಿಪಿ–64 ರಲ್ಲಿ ಮಾಹಿತಿ ಇರುವುದಿಲ್ಲ. ನಾವು ಕಳುಹಿಸಿದ ಸಿಡಿಆರ್ ದಾಖಲೆಗಳನ್ನು ವೃತ್ತ ನಿರೀಕ್ಷಕರು ಪಡೆದ ಬಗ್ಗೆ ಹಿಂಬರಹ ಮಾಡಿರುತ್ತಾರೆ. ಸಿಡಿಆರ್ ವಿವರ ಗಳನ್ನು ಕೊಡಲು ಯಾವ ಅಧಿಕಾರಿ ಕೋರಿರುತ್ತಾರೋ ನಾವು ಅವರಿಗೆ ವಿವರಣೆ ನೀಡುತ್ತೇವೆ ಒಂದು ಪಕ್ಷ ಆ ಅಧಿಕಾರಿ ಮತ್ತೊಬ್ಬ ಅಧಿಕಾರಿಗೆ ಅಥಾರಿಟಿ ನೀಡಿದಲ್ಲಿ ಮತ್ತೊಬ್ಬ ಅಧಿಕಾರಿಗೆ ಮಾಹಿತಿ ಕೊಡುತ್ತೇವೆ. ನಮ್ಮ ಕಚೆರಿಯಲ್ಲಿ ಲಭ್ಯ ಇರುವ ದಾಖಲೆಗಳ ಪ್ರಕಾರ ವೃತ್ತ ನಿರೀಕ್ಷಕರಿಗೆ ಸಿಡಿಆರ್ ವಿವರಗಳನ್ನು ಪಡೆಯಲು ಅಥಾರಿಟಿ ಇತ್ತೋ, ಇಲ್ಲವೋ ಎಂಬುದು ಕಂಡುಬರುವುದಿಲ್ಲ.

11. ಮೊಬೈಲ್ ನಂಬರ್ 9845599024 ನಿಂದ ಕರೆ ಹೋದ ಬಗ್ಗೆ ನಿಪಿ–63 ರಲ್ಲಿ ಸಿಡಿಆರ್ ವಿವರಣೆ ಇರುವುದಿಲ್ಲ, ಆದರೆ ನಿಪಿ–64 ಸಿಡಿಯಲ್ಲಿ ಇರುತ್ತದೆ. ನಿಪಿ–64 ಸಿಡಿಯಲ್ಲಿ ಇರುವ ಸಂಪೂರ್ಣ ಮಾಹಿತಿ ನ್ಯಾಯಾಲಯದ ಮುಂದೆ ಇರುವ ಸಿಡಿಆರ್ ನಲ್ಲಿ ಕಂಡುಬಂದಿರುವುದಿಲ್ಲ. ನಾವು ಪೊಲೀಸರಿಗೆ ಸಿಡಿಯಲ್ಲಿ ಸಿಡಿಆರ್ ಮಾಹಿತಿಗಳನ್ನು ನಿಡಿದ್ದು, ಅದರ ಪ್ರಿಂಟ್ ಔಟ್ ಗಳನ್ನು ಅವರೇ ತೆಗೆದಿರುತ್ತಾರೆ.

ಈ ಹಂತದಲ್ಲಿ ಶ್ರೀ ಹೆಚ್.ಆರ್.ವಿ. ವಕೀಲರು ನಿಪಿ–64 ಸಿಡಿಯನ್ನು ಪರಿಶೀಲಿಸಿ ಮುಂದುವರೆದ ಪಾಟೀಸವಾಲನ್ನು ಮಾಡಬೇಕಾಗಿರುವ ಕಾರಣ ಮತ್ತೊಂದು ಸಮಯಾವಕಾಶ ಕೋರಿದ್ದು, ಸಾಕ್ಷಿದಾರರಿಗೆ ಮುಂದಿನ ಹಿಯರಿಂಗ್ ತಾರೀಖಿನಂದು ವಿ.ಸಿ ಮೂಲಕ ಹಾಜರಾಗಲು ಅನುಮತಿ ನೀಡಿರುತ್ತದೆ.

SC: 77/2020
PW:38 CW:47

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 01.09.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.